SRI M. P. PRAKASH (Minister of State for Agriculture).—

(a) Yes.

(b) The matter is under consideration.

ಸಭೆಯಲ್ಲಿ ಮಂಡಿಸಲಾದ ಕಾಗದ ಪತ್ರಗಳು

ಶ್ರೀ ಎ. ಲಕ್ಷ್ಮೀಸಾಗರ್ (ಕಾನೂನು ಹಾಗೂ ಸಂಸದೀಯ ವ್ಯವಹಾರ ಮಂತ್ರಿಗಳು).—ಮಾನ್ಯ ಸಭಾಧ್ಯಕ್ಷರೇ, ಭಾರೀ ಹಾಗೂ ಮಧ್ಯಮ ಕೈಗಾರಿಕೆ ಮಂತ್ರಿಗಳಾದ ಶ್ರೀ ಜೆ. ಎಚ್. ಪಟೇಲ್ ಅವರ ಪರವಾಗಿ ೧೯೫೬ನೇ ಇಸವಿಯ ಕಂಪನಿಗಳ ಶಾಸನದ ೬೧೯(ಎ) ಕಲಮಿನ ಮೇರೆಗೆ ೩೧-೩-೧೯೮೫ನೇ ಸಾಲಿಗೆ ಅಂತ್ಯಗೊಂಡ ಕರ್ನಾಟಕ ಕೈಮಗ್ಗ ಅಭಿವೃದ್ಧಿ ನಿಗಮ ನಿಯಮಿತದ ವಿಳಿನೇ ವಾರ್ಷಿಕ ವರದಿ ಹಾಗೂ ಲೆಕ್ಕ ಪತ್ರಗಳನ್ನು ಸಭೆಯ ಮುಂದಿಡುತ್ತೇನೆ.

ಅಧ್ಯಕ್ಷರು.—ಕಾಗದ ಪತ್ರಗಳನ್ನು ಸಭೆಯ ಮುಂದಿಡಲಾಗಿದೆ. ಮುಂದೆ ಗಮನ ಸೆಳೆಯುವ ಸೂಚನೆಯನ್ನು ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನನ್ನ ಕಾಲಿಂಗ್ ಅಟೆನ್‌ಷನ್ ಬರಲಿಲ್ಲ.

ಅಧ್ಯಕ್ಷರು.—ಅದನ್ನು ನಾನು ನೋಡುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಇವೊತ್ತು ಈ ಒಂದು ವಿಷಯ ಡೆಕ್ಕನ್ ಹೆರಾಲ್ಡ್ ಪೇಪರ್‌ನಲ್ಲೂ ಬಂದಿದೆ. ನಾನ್ ಪೆಡ್ಯೂಲ್ಡ್ ಕ್ಯಾಸ್ಟ್ ಹಾಗೂ ನಾನ್ ಪೆಡ್ಯೂಲ್ಡ್ ಟ್ರೈಬ್ಸ್ ಅಸೋಸಿಯೇಷನ್‌ನವರು ನಾಳೆ ದಿವಸ ಅಂದರೆ ೧೫ ಆಗಸ್ಟ್ ೧೯೮೫ ರಂದು ರೋಸ್ಟರ್ ಸಿಸ್ಟಂ ಬಗ್ಗೆ ಬ್ಲಾಕ್‌ಡೇ ಎಂದು ಡೆವಾನ್ಸ್‌ಷೇಷನ್ ಮಾಡಂತ್ತಾರೆ. ಆದಕ್ಕೋಸ್ಕರ ಈ ವಿಷಯ ಬಹಳ ಮುಖ್ಯವಾದುದರಿಂದ ಇದನ್ನು ಇವೊತ್ತೇ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಅಧ್ಯಕ್ಷರು.—ನಾನು ಈಗಾಗಲೇ ಪ್ರಶ್ನೋತ್ತರ ವೇಳೆ ಮುಗಿಯಿತು ಎಂದು ಹೇಳಿದ್ದೇನೆ. ನೀವು ಕೊಟ್ಟಿರುವ ಕಾಲಿಂಗ್ ಅಟೆನ್‌ಷನ್ ಕೂಡ ನಾಳೆ ನೋಡುತ್ತೇನೆ. ಅದನ್ನು ಸೋಮವಾರ ತೆಗೆದುಕೊಳ್ಳೋಣ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಅದನ್ನು ಸೋಮವಾರ ತೆಗೆದುಕೊಂಡರೆ ಏನೂ ಪ್ರಯೋಜನ ಇಲ್ಲ. ಇವೊತ್ತೇ ಇದರ ಮಹತ್ವ ಗಾಂಭೀರ್ಯತೆಕ್ಕಂಥಾದ್ದು. ಆದುದರಿಂದ ಇಂದೇ ತೆಗೆದುಕೊಳ್ಳಬೇಕು.

ಅಧ್ಯಕ್ಷರು.—ಇವೊತ್ತು ೨ ಕಾಲಿಂಗ್ ಅಟೆನ್‌ಷನ್ ಇದೆ. ನಿಮ್ಮದು ಸೋಮವಾರ ಬರುತ್ತದೆ. ಅಲ್ಲಿಯವರೆಗೆ ಸ್ವಲ್ಪ ಸಮಾಧಾನದಿಂದ ಇರಿ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ.—ಮಾನ್ಯ ಅಧ್ಯಕ್ಷರೇ, ನಾನು ಮೊದಲೇ ಹೇಳಿದ್ದನು ಮತ್ತು ರಿಪೀಟ್ ಮಾಡಬೇಕಾಗುತ್ತದೆ. ನಾಳೆ ದಿವಸ ಈ ನಾನ್ ಪೆಡ್ಯೂಲ್ ಕ್ಯಾಸ್ಟ್ ಹಾಗೂ ನಾನ್ ಪೆಡ್ಯೂಲ್ಡ್ ಟ್ರಿಬ್ಸ್‌ನವರು, ನಾಳೆ ದಿವಸ ಅಂದರೆ ೧೫ನೇ ಆಗಸ್ಟ್ ೧೯೮೫ ರಂದು ರಿಸರ್ವೇಷನ್ ಸಿಸ್ಟಂ ಬಗ್ಗೆ ಹಾಗೂ ರೋಸ್ಟರ್ ಬಗ್ಗೆ ಬ್ಲಾಕ್‌ಡೇ ಎಂದು ಡೆಮಾನ್‌ಸ್ಟ್ರೇಷನ್ ಮಾಡುತ್ತಾರೆ ಅವರು ಮಾನ್ಯ ಮುಖ್ಯಮಂತ್ರಿಗಳನ್ನೂ ಸಹ ಬ್ಲೇಮ್ ಮಾಡಿದ್ದಾರೆ. ಅವರು ಈ ಬಗ್ಗೆ ಎಜಿಟೇಷನ್ ಮಾಡುವಾಗ ಮುಂದೆ ಏನಾದರೂ ಗುಜರಾತ್ ಟೈಪ್ ತರಹ ಇಲ್ಲಿಯೂ ಇದು ಮುಂದುವರಿಸುವ ಏನಾ ಒಂದು ಕುತಂತ್ರ ಮಾಡುತ್ತಿದ್ದಾರೆ ಅದರ ಬಗ್ಗೆ ನಾನು ತುರ್ತಾಗಿ ರೈಸ್ ಮಾಡುತ್ತಿದ್ದೇನೆ. ಅದಕ್ಕೆ ತಾವು ಈ ವಿಷಯವನ್ನು ಇಂದೇ ತೆಗೆದುಕೊಳ್ಳಬೇಕು ಎಂದು ಕೇಳುತ್ತೇನೆ.

ಅಧ್ಯಕ್ಷರು.—ನಿಮ್ಮ ವಿಚಾರವನ್ನು ಸೋಮವಾರ ಇಡುತ್ತೇನೆ.

ಶ್ರೀ ಎಸ್. ಬಂಗಾರಪ್ಪ.—ಸೋಮವಾರ ಅದನ್ನು ಇಟ್ಟರೆ ಏನೂ ಪ್ರಯೋಜನ ಇಲ್ಲ. ಮಾನ್ಯ ಮಲ್ಲಿಕಾರ್ಜುನ ಖರ್ಗೆಯವರು ಹೇಳಿದ್ದರಲ್ಲಿ ಸ್ವಲ್ಪ ಸತ್ಯಾಂಶ ಇದೆ. ಅದನ್ನು ಇಂದೇ ತೆಗೆದುಕೊಂಡರೆ ಉತ್ತಮ.

ಅಧ್ಯಕ್ಷರು.—ಅದನ್ನು ಸಿಖಿಳಕ್ಕೆ ಕನ್‌ವರ್ಟ ಮಾಡಿ ತೆಗೆದುಕೊಳ್ಳಬಹುದಲ್ಲವೇ?